KARNATAKA LEGISLATIVE ASSEMBLY, RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE:

**ಮುಕ್ತಾಯ** ಪರಿಷತ್‌ನಲ್ಲಿ ಭೂ ಸುಧಾರಣೆ ಕಾಯ್ದೆ ಚರ್ಚೆ । ಗದ್ದಲದಿಂದ ಪಾಸಾಗದೇ ಕಲಾಪ ಮುಂದೂಡಿಕೆ । ಆರು ದಿನಕ್ಕೆ ಅಧಿವೇಶನ ಅಂತ್ಯ

# ತಡರಾತ್ರಿ 1 ಗಂಟೆವರೆಗೂ ನಡೆದ ಕಲಾಪ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕೊನೆಯ ದಿನವಾದ ಶನಿವಾರ ವಿಧಾನಪರಿಷತ್ ಕಲಾಪ ತಡರಾತ್ರಿ 1 ಗಂಟೆಯವರೆಗೂ ನಡೆಯಿತು. ಕರ್ನಾಟಕ ಭೂ ಸುಧಾರಣೆ ತಿದ್ದುಪಡಿ ವಿಧೇಯಕ ಪರ-ವಿರೋಧವಾಗಿ ಆಡಳಿತ ಮತ್ತು ಪ್ರತಿಪಕ್ಷಗಳ ನಡುವೆ ತೀರ್ವ ಸುದೀರ್ಘ ಚರ್ಚೆ ಮತ್ತು ವಾಕ್ಸಮರ ರಾತ್ರಿ 1 ಗಂಟೆಯಾದರೂ ಮುಕ್ತಾಯ ವಾಗಲಿಲ್ಲ. ತೀರ್ವ ಗದ್ದಲ, ಚಕಮಕಿಯಿಂದಾಗಿ ಭೂಸುಧಾರಣೆ ತಿದ್ದುಪಡಿ ವಿಧೇಯಕ ಪಾಸ್ ಆಗದೆ ಕಲಾಪವನ್ನು ಅನಿರ್ದಿಷ್ಟಾವಧಿಗೆ ಮುಂದೂಡಲಾಯಿತು.

ಭೂಸುಧಾರಣೆ ತಿದ್ದುಪಡಿ ವಿಧೇಯಕದ ಬಗ್ಗೆ ಚರ್ಚೆಯನ್ನು ರಾತ್ರಿ 11 ಗಂಟೆಗೆ ವೇಳೆಗೆ ಆರಂಭಿಸಲಾಯಿತು. ಸಚಿವ ಆರ್.ಅಶೋಕ್ ಅವರು ಈ ತಿದ್ದುಪಡಿ ಕಾಯ್ದೆ ಮಂಡಿಸಿ ಮಾತನಾಡಿ, ಕೃಷಿಗೆ ಹೆಚ್ಚು ಯುವಕರು ಬರಬೇಕು. ಕೃಷಿಗೆ ಹೊಸ ಸ್ಪರ್ಶ ನೀಡಲು ಈ ತಿದ್ದುಪಡಿ ತರಲಾಗಿದೆ ಎಂದರು. ಇದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ವಿರೋಧ ಪಕ್ಷದ ಸದಸ್ಯರು, ರೈತರಿಗೆ ಮರಣ ಶಾಸನವಾಗುವ ಈ ಮಸೂದೆಯನ್ನು ಯಾವುದೇ ಕಾರಣಕ್ಕೂ ಮಂಡಿಸಬಾರದು ಎಂದು ತೀವ್ರ ವಿರೋಧ ವ್ಯಕ್ತಪಡಿಸಿದರು.

ವಿರೋಧ ಪಕ್ಷದ ನಾಯಕ ಎಸ್.ಆರ್. ಪಾಟೀಲ್ ಮಾತನಾಡಿ, ಕಪ್ಪು ಹಣವನ್ನು ಬಿಳಿ ಮಾಡುವುದಕ್ಕೆ ಸದರಿ ತಿದ್ದುಪಡಿ ಇದು ಅವಕಾಶ ಮಾಡಿಕೊಡುತ್ತಾರೆ. ಬೇರೆ ರಾಜ್ಯದ ವರು ಇಲ್ಲಿ ಭೂಮಿ ಖರೀದಿ ಮಾಡು ವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ ಎಂದು ಕಿಡಿಕಾರಿದರು. ಎರಡೂ ಪಕ್ಷಗಳ ಮಧ್ಯೆ ವಾಕ್ಸಮರ ನಡೆದಿದ್ದರಿಂದ ಮಸೂದೆಯನ್ನು ಮತಕ್ಕೆ ಹಾಕಲಾಗಲಿಲ್ಲ.



**ರಾತ್ರಿ 11 ಗಂಟೆವರೆಗೆ ನಡೆದ ವಿಧಾನಸಭೆ:** ವಿಧಾನಸಭೆಯಲ್ಲಿ ಅವಿಶ್ವಾಸ ನಿರ್ಣಯ ಮಂಡನೆ, ಭ್ರಷ್ಟಾಚಾರ, ಡಿಜೆ ಹಳ್ಳಿ, ಕೆ.ಜಿ.ಹಳ್ಳಿ ಗಲಭೆ ವಿಚಾರವಾಗಿ ಬಿಜೆಪಿ ಹಾಗೂ ಪ್ರತಿಪಕ್ಷ ಕಾಂಗ್ರೆಸ್ ನಡುವೆ ಸುದೀರ್ಘ ಚರ್ಚೆ, ವಾಗ್ವಾದ ನಡೆಯಿತು. ಈ ಕಾರಣದಿಂದಾಗಿ ರಾತ್ರಿ 11ರ ವರೆಗೂ ಕಲಾಪ ನಡೆಯಿತು.

**ಅಧಿವೇಶನ ಅಂತ್ಯ:** 6 ದಿನಗಳ ಕಾಲ ನಡೆದ ವಿಧಾನ ಮಂಡಲದ ಅಧಿವೇಶನ ಶನಿವಾರ ಮುಕ್ತಾಯವಾಯಿತು. ಕೊನೆ ದಿನ ರಾತ್ರಿ 1 ಗಂಟೆ ವರೆಗೂ ಕಲಾಪ ನಡೆದಿದ್ದು ವಿಶೇಷವಾಗಿತ್ತು. ಅಧಿವೇಶನದಲ್ಲಿ ಪ್ರತಿಪಕ್ಷಗಳ ತೀವ್ರ ವಿರೋಧದ ನಡುವೆಯೂ ಭೂಸುಧಾರಣೆ ತಿದ್ದುಪಡಿ ವಿಧೇಯಕ ಹಾಗೂ ಎಪಿಎಂಸಿ ತಿದ್ದುಪಡಿ ಕಾಯ್ದೆ ಸೇರಿದಂತೆ 35ಕ್ಕೂ ಹೆಚ್ಚು ವಿಧೇಯಕಗಳು ಅಂಗೀಕಾರಗೊಂಡವು.

ಕೊರೋನಾ ಹರಡದಂತೆ ಮೊದಲ ಬಾರಿಗೆ ಹಲವು ಮುಂಜಾಗ್ರತೆಗಳ ನಡುವೆ ನಡೆದ ಉಭಯ ಸದನಗಳ ಕಲಾಪದಲ್ಲಿ ವಿಶೇಷವಾಗಿ ಭೂ ಸುಧಾರಣೆ ಕಾಯ್ದೆ, ಎಪಿಎಂಸಿ ಕಾಯ್ದೆ ಬಗ್ಗೆ ತೀವ್ರ ಚರ್ಚೆ ನಡೆಯಿತು. ಪ್ರತಿಪಕ್ಷ ಕಾಂಗ್ರೆಸ್ ಈ ಎರಡು ವಿಧೇಯಕ ವಿರೋಧಿಸಿ ಪ್ರತಿಭಟನೆ, ಸಭಾತ್ಯಾಗ ಮಾಡಿದ್ದು ವಿಶೇಷ.

ಉಳಿದಂತೆ ಕೋವಿಡ್ ವೈದ್ಯಕೀಯ ಉಪಕರಣಗಳ ಖರೀದಿಯಲ್ಲಿ ನಡೆದಿದ ಎನ್ನಲಾದ ಭ್ರಷ್ಟಾಚಾರ, ಸಂಕಷ್ಟ ದಲ್ಲಿರುವ ಬಡವರಿಗೆ ಪರಿಹಾರ ನೀಡುವಲ್ಲಿ, ಪ್ರವಾಹ ದಿಂದ ಸಂಕಷ್ಟದಲ್ಲಿರುವವರಿಗೆ ನೆರವಾಗಲು ವಿಫಲವಾಗಿದೆ ಎಂದು ಪ್ರತಿಪಕ್ಷಗಳು ತರಾಟೆಗೆ ತೆಗೆದುಕೊಂಡವು. ಅಧಿವೇಶನದ ವೇಳೆ ರಾಜ್ಯಸಭಾ ಸದಸ್ಯ ಅಶೋಕ್ ಗಸ್ತಿ, ಕೇಂದ್ರ ಸಚಿವ ಸುರೇಶ್ ಅಂಗಡಿ, ಶಾಸಕ ನಾರಾಯಣರಾವ್, ಎಸ್.ಪಿ.ಬಿ ಅವರು ಅಗಲಿದ್ದರಿಂದ ನಿತ್ಯ ಸಂತಾಪ ಸೂಚಿಸುವ ಪ್ರಸಂಗ ಎದುರಾಯಿತು. 6 ದಿನಗಳ ಅವಧಿಯಲ್ಲಿ ವಿಧೇಯಕಗಳ ಮೇಲೆ ಚರ್ಚೆ, ಅಂಗೀಕಾರಕ್ಕೆ ಹೆಚ್ಚು ಕಾಲ ಬಳಕೆಯಾಯಿತು. ಹೆಚ್ಚು ಕಡಿಮೆ 37 ವಿಧೇಯಕಗಳನ್ನು ಸದನದಲ್ಲಿ ಮಂಡಿಸಿ ಒಪ್ಪಿಗೆ ಪಡೆಯಲಾಯಿತು. ಕಲಾಪದ ಪಟ್ಟಿಯಲ್ಲಿ ಇದ್ದ ಅನೇಕ ವಿಷಯಗಳನ್ನು ಚರ್ಚೆಗೆ ಎತ್ತಿಕೊಳ್ಳಲು ಆಗದೇ ಕೈ ಬಿಟ್ಟಿದ್ದು ಅನೇಕ ಸದಸ್ಯರ ಅಸಮಾಧಾನಕ್ಕೆ ಕಾರಣವಾಯಿತು. ಅಧಿವೇಶನದ ಕೊನೆ ದಿನ ಪ್ರತಿಪಕ್ಷ ಕಾಂಗ್ರೆಸ್ ಸರ್ಕಾರ ವಿಶ್ವಾಸ ಕಳೆದುಕೊಂಡಿದೆ ಎಂದು ಮಂಡಿಸಿದ ಪ್ರಸ್ತಾವನೆ ಮೇಲೆ ಚರ್ಚೆ, ವಾಗ್ವಾದ ನಡೆದವು.